1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ

ಸಿ.ಸಿ ಸಂಖ್ಯೆಃ 166/2023

ಸಿ.ಡಬ್ಲ್ಯೂ-7 ಪಿ.ಡಬ್ಲ್ಯೂ-7

ಸಾಕ್ಷಿದಾರರ ಹೆಸರು : ಶ್ರೀನಿವಾಸ
ತಂದೆಯ ಹೆಸರು : ವೆಂಕಟರಾಮಯ್ಯ
ವಯಸ್ಸು : 65 ವರ್ಷ
ಉದ್ಯೋಗ : ನಿವೃತ ಎ.ಎಸ್.ಐ.
ವಾಸ : ಬೆಂಗಳೂರು

ದೃಶ್ಯ ಸಮ್ಮೇಳನದ ಮೂಲಕ ಕರೆಯಿಸಿ ಪ್ರಮಾಣೀಕರಿಸಿದ ದಿನಾಂಕ :27.07.2026.

ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ

1. ನಾನು ಬೆಂಗಳೂರಿನ ಬಾಂಬ್ ನಿಷ್ಕ್ರಿಯ ದಳದಲ್ಲಿ 2000 ರಿಂದ 2021 ರವರೆಗೆ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ01.11.2020 ರಾಜ್ಯದ ಅಪರ ಪೊಲೀಸ್ ಮಹಾ ನಿರ್ದೇಶಕರವರು ಸಾಗರದ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜಪ್ತುಪಡಿಸಿಕೊಂಡಿರುವ ಸ್ಫೋಟಕಗಳನ್ನು ನಾಶಪಡಿಸುವಂತೆ ಲಿಖಿತ ಆದೇಶವನ್ನು ನೀಡಿದರು. ಸದರಿ ರವರ ಆದೇಶದ ಮೇರೆಗೆ ನಾನು ದಿಃ04.11.2020 ರಂದು ಸಾಗರಕ್ಕೆ ಬಂದು ಸಾಗರ ಗ್ರಾಮಾಂತರ ಪೊಲೀಸರು ಜಪ್ತುಪಡಿಸಿಕೊಂಡ ಸ್ಫೋಟಕಗಳನ್ನು ಠಾಣೆಯಿಂದ 5 ಕಿ ಮೀ ವ್ಯಾಪ್ತಿಯಲ್ಲಿರುವ ವರದಹಳ್ಳಿಯಲ್ಲಿ ಸದರಿ ಸ್ಫೋಟಕಗಳನ್ನು ಬೆಂಕಿ ಇಟ್ಟು ಪರಿಸರಿಕೆ ಮತ್ತು ಸಾರ್ವಜನಿಕರಿಗೆ ಹಾನಿಯಾಗದ ಸ್ಥಳದಲ್ಲಿ ನಾಶಪಡಿಸಿದೆವು. ನಾಶಪಡಿಸುವ ಮೊದಲು ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಕಾಯ್ದಿರಿಸಿದೆವು. ನಾಶಪಡಿಸಿರುವುದಕ್ಕೆ ಸಂಬಂಧಿಸಿದ ವರದಿಯನ್ನು ಚಾಸ 16 ರವರಿಗೆ ನೀಡಿದೆವು.

3. ಸಾಕ್ಷಿಯು ವರದಿಯ ದೃಢೀಕೃತ ನಕಲನ್ನು ಮತ್ತು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ವರದಿಯ ದೃಢೀಕೃತ ನಕಲನ್ನು ನಿಪಿ 14 ಎಂದು, ಸಾಕ್ಷಿಯ ಸಹಿಯನ್ನು ನಿಪಿ 14(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಆರೋಪಿ ಪರ ಶ್ರೀ ಐ.ಎನ್.ಎಸ್. ವಕೀಲರಿಂದ

1. ನಾವು ಸೊ್ಪಟಕಗಳನ್ನು ನಾಶಪಡಿಸಿದ ಜಾಗ ಸರ್ಕಾರಿ ಜಾಗವಾಗಿರುತ್ತದೆ. ಸೊ್ಪಟಕಗಳನ್ನು ನಾಶಪಡಿಸಲು ಠಾಣೆಯ ಪೊಲೀಸರು ಸ್ಥಳವನ್ನು ತೋರಿಸಿದರು. ದಾಖಲೆಗಳನ್ನು ಪರಿಶೀಲಿಸಿದ ನಂತರವೇ ನಾವು ಸೊ್ಪಟಕಗಳನ್ನು ನಾಶಪಡಿಸುತ್ತೇವೆ. ಸೊ್ಪಟಕಗಳನ್ನು ನಾಶಪಡಿಸಿದ ಜಾಗದಲ್ಲಿ ನಾಶಪಡಿಸಲು ತಹಶೀಲ್ದಾರ್ ರವರು ಅನುಮತಿ ನೀಡಿರುವುದಕ್ಕೆ ಸಂಬಂಧಿಸಿದ ದಾಖಲೆಯನ್ನು ನೋಡಿರುವುದಿಲ್ಲ. ನಾನು ಯಾವುದೇ ಸೊ್ಪಟಕಗಳನ್ನು ನಾಶಪಡಿಸದೇ ಇದ್ದರೂ ನಾಶಪಡಿಸಿದ್ದೇವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸೊ್ಪಟಕಗಳನ್ನು ನಾಶಪಡಿಸಿರುವುದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಪಂಚನಾಮೆಯನ್ನು ಜರುಗಿಸಿರುವುದಿಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು,
ಸಾಗರ.